**ಓ ಎಸ್ ನಂಃ 992-14**
**ಪಿ ಡಬ್ಲ್ಯೂ ಃ 1**

**ದಿಃ 11-07-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್ ಪಿ ವಕೀಲರಿಂದ**

ನಾನು ಚಿಕ್ಕಸೋಲೂರಿನಲ್ಲಿ ವಾಸ ಮಾಡುತ್ತಿದ್ದೇನೆ, ಚಿಕ್ಕಸೋಲೂರು ಮತ್ತು ಸೋಲೂರಿನಲ್ಲಿ ಹಾದಿಗೆ ಹೋಗುವ ರಸ್ತೆ ಸ ನಂ 148, 150, 89, 84, ಹಾಗೂ 99 ಸ ನಂ ಗಳು ಹಾದು ಹೋಗುತ್ತವೆ, ನನಗೆ ಗೊತ್ತಿದ್ದ ಕಾರಣ ಮೇಲೆ ಹೇಳಿದ ಸ ನಂ ಗಳಲ್ಲಿ ರಸ್ತೆ ಹಾದು ಹೋಗುತ್ತಿದೆ ಎಂದು ಹೇಳುತ್ತಿದ್ದೇನೆ, ಸ ನಂ 167 ರಲ್ಲಿ ರಸ್ತೆ ಇದೆಯ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆಲ್ಲಿ ರಸ್ತೆ ಇದೆಯ ಇಲ್ಲವೊ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ, 1ನೇ ಪ್ರತಿವಾದಿ ಸ ನಂ 157 ರಲ್ಲಿ ಆಸ್ತಿ ಕೊಂಡುಕೊಂಡಿದ್ದಾರೆ, ಅವರು ಸನಂ 157/1 ರಲ್ಲಿ 3 ಎಕರೆ 25 ಗುಂಟೆ ಜಮೀನನ್ನು ಕೊಂಡು ಕೊಂಡಿದ್ದಾರೆ, ಆದರೆ ಯಾವಾಗ ಖರೀದಿಸಿದ್ದಾರೆಂದು ನನಗೆ ಗೊತ್ತಿಲ್ಲ, ಅವರು ಸುಮಾರು 18 ವರ್ಷಗಳಿನ ಹಿಂದೆ ಕೊಂಡು ಕೊಂಡಿರಬಹುದು, 15 ವರ್ಷದ ಈಚಿನಿಂದ ಅವರು ಆ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಅಂದರೆ ಸರಿ, ಸೋಲೂರು ಕ್ರಿಶ್ಚಿಯನ್ ಸಮುದಾಯಕ್ಕೆ ಸಂಬಂಧಪಟ್ಟಂತೆ ಎಲ್ಲೆಲ್ಲಿ ಆಸ್ತಿ ಇದೆ ಅಂದರೆ ನನಗೆ ಗೊತ್ತಿಲ್ಲ, ಸೋಲೂರು ಕ್ರಿಶ್ಚಿಯನ್ ಸಮುದಾಯದವರ ಕೆಲವರ ಪರಿಚಯ ಇದೆ, ತಿಮ್ಮವ್ವ, ಕೀಯರಮ್ಮ ಉರುಫ್ ಫತಿಜಮ್ಮ ರವರ ಪರಿಚಯ ಇದೆ, ಅವರ ಮೂಲ ಹೆಸರು ತಿಮ್ಮವ್ವ, ಅವರ ಗಂಡನ ಹೆಸರು ರಾಜಪ್ಪ ಆಗಿರುತ್ತದೆ, ಬಹಳ ವರ್ಷದಿಂದ ತಿಮ್ಮವ್ವ ರವರ ಪರಿಚಯ ಇದೆ, ತಿಮ್ಮವ್ವ ರವರು ಯಾವಾಗ ತೀರಿಕೊಂಡಿದ್ದರು ಎಂದು ಹೇಳಲು ಆಗುವುದಿಲ್ಲ.

ದಾನ ಪತ್ರದ ಮೂಲಕ ಬಂದಿತ್ತು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಆ ಬಗ್ಗೆ ನಾನು ನೋಡಿಲ್ಲ. ಅವರು ಮೂಲತಃ ಎಲ್ಲಿ ವಾಸ ಮಾಡುತ್ತಿದ್ದರು ಎಂಬ ಬಗ್ಗೆ ದಾಖಲೆ ನೋಡಿಲ್ಲ ಅಂದರೆ ಸಾಕ್ಷಿ ಅವರು ಸೋಲೂರಿನಲ್ಲಿ ವಾಸ ಮಾಡುತ್ತಿದ್ದರು ಎಂದು ಹೇಳುತ್ತಾರೆ, ತಿಮ್ಮವ್ವ ರವರಿಗೆ ಯಾವ ರೀತಿ ಬಂದಿತ್ತು ಎಂದು ಗೊತ್ತಿಲ್ಲ, ಆ ಹೆಸರುಗಳನ್ನು ಅಕ್ಕ ಪಕ್ಕದವರು ಮತ್ತು ಸಹಪಾಠಿಗಳು ಹೇಳಿದ ಕಾರಣ ನನಗೆ ಗೊತ್ತಾಗಿತ್ತು, ತಿಮ್ಮವ್ವರಿವಗೆ ಎಷ್ಟು ಜನ ಮಕ್ಕಳಿದ್ದಾರೆ ಅಂದರೆ ಗೊತ್ತಿಲ್ಲ, ನಾನು ಮತ್ತು ಅವರು ಬೇರೆ ಬೇರೆ ಊರಿನವರು ಇದ್ದ ಕಾರಣ ಈ ವಿಚಾರ ಗೊತ್ತಿಲ್ಲ ಎಂದು ಹೇಳುತ್ತಾರೆ, ದಾವಾ ಸ್ವತ್ತಿನ ದಾಖಲಾತಿ ನೋಡಿದ ಕಾರಣ ದಾವಾ ಸ್ವತ್ತು ನನಗೆ ಗೊತ್ತಿದೆ, ಸಾಕ್ಷಿ ಊರಿನ ಸ್ಕೆಚ್ ಕಾಪಿ, ಪಹಣಿ ಮತ್ತು ಇತರೆ ದಾಖಲಾತಿ ನೋಡಿದ್ದೇನೆ ಎಂದು ಹೇಳುತ್ತಾರೆ, ದಾವಾ ಸ್ವತ್ತಿನ ಪೂರ್ವಕ್ಕೆ ಕಾಳಹಾದಿ, ಪಶ್ಚಿಮಕ್ಕೆ ಸ ನಂ 158 ರ ಜಮೀನಿದೆ ಮತ್ತು ಹಳೆ ಆಸ್ಪತ್ರೆ ಕಟ್ಟಡ, ಉತ್ತರಕ್ಕೆ ಈಗ ಮಂಗಳೂರು-ಬೆಂಗಳೂರು ರಸ್ತೆ ಮತ್ತು ಸ ನಂ 161 ರ

ಜಮೀನಿದೆ, ದಕ್ಷಿಣಕ್ಕೆ ಚಿಕ್ಕಸೋಲೂರು ರಸ್ತೆ ಇದೆ, ದಾವಾ ಜಮೀನಿನ ಉತ್ತರಕ್ಕೆ ಸೈಟುಗಳನ್ನು ಮಾರಿ ವಾಸದ ಮನೆ ಕಟ್ಟಿಕೊಂಡಿದ್ದಾರೆ ಅಂದರೆ ಸರಿ, ಆ ವಾಸದ ಮನೆ ನಂತರ ರಸ್ತೆ ಬರುತ್ತದೆ ಅಂದರೆ ಸರಿ, ದಾವಾ ಸ್ವತ್ತಿನ ಉತ್ತರಕ್ಕೆ ಲಗತ್ತಾಗಿ ಯಾವುದೇ ದೇವಸ್ಥಾನ ಇಲ್ಲ, ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಯಾವುದೇ ಸಮನ್ಸ್ ಬಂದಿಲ್ಲ, ದಾವಾ ವಾರಸುದಾರರು ಕರೆದುಕೊಂಡು ಬಂದಿದ್ದರು, ರಾಜಪ್ಪನವರ ಕುಟುಂಬದವರು ಈ ದಾವೆಯನ್ನು ಹಾಕಿದ್ದಾರೆ, ಆದರೆ ಯಾವ ಉದ್ದೇಶಕ್ಕಾಗಿ ಹಾಗೂ ಈ ದಾವೆಯನ್ನು ಸಂಬಂಧಿಕರು ರಾಜಪ್ಪನವರ ಕುಟುಂಬದ ವಿರುದ್ಧ ಹಾಕಿದ್ದಾರೆ, ದಾವಾದ ಬಗ್ಗೆ ನನಗೆ ಯಾವುದೇ ಮಾಹಿತಿ ಗೊತ್ತಿಲ್ಲದಿದ್ದರೂ ಸಹ ವಾದಿಯವರ ಮಾತು ಕೇಳಿ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ, ವಾದಿಗಳಿಗೂ ಮತ್ತು ದಾವಾ ಆಸ್ತಿಗೂ ಯಾವುದೆ ಸಂಬಂಧ ಇದೆ ಅಂದರೆ ಸರಿಯಲ್ಲ, ವಾದಿಗಳು ಸುಳ್ಳು ದಾವೆ ದಾಖಲಿಸಿದ್ದಾರೆ ಅಂದರೆ ಸರಿಯಲ್ಲ, ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**